ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ

ದಿನಾಂಕ : DATE : 13/03/2020

# ಒಗ್ಗಟ್ಟು ಪ್ರದರ್ಶಿಸಿದ ಅರ್ಹ ಸಚಿವರು

## ಸಚಿವ ಸುಧಾಕರ್ ಬೆಂಬಲಕ್ಕೆ ನಿಂತ ಜಾರಕಿಹೊಳಿ, ಎಸ್‌ಟಿಎಸ್, ಹೆಬ್ಬಾರ್

## ಪ್ರಿಯಾಂಕ, ರಮೇಶ್‌ಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದ ನೂತನ ಸಚಿವರು

13-3-20

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ರಾಜ್ಯದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬರಲು ಪ್ರಮುಖ ಪಾತ್ರವಹಿಸಿ, ಉಪಚುನಾವಣೆಯಲ್ಲಿ ಗೆಲುವು ಸಾಧಿಸಿ ಸಚಿವರಾಗಿರುವ 10 ಸಚಿವರ ಇದೀಗ ಒಂದಾಗಿ ಕಾಣಿಸಿಕೊಳ್ಳುವ ಮೂಲಕ, ತಮ್ಮದು ಒಂದು ತಂಡ ಎನ್ನುವ ಸಂದೇಶ ರವಾನಿಸುತ್ತಿದ್ದಾರೆ.

ಕಾಂಗ್ರೆಸ್-ಜೆಡಿಎಸ್‌ನ 17 ಶಾಸಕರು ರಾಜೀನಾಮೆ ನೀಡಿ ಬಿಜೆಪಿ ಸೇರಿದ ದಿನವೇ, ಈ ನಾಯಕರದ್ದು ಬಿಜೆಪಿಯಲ್ಲಿ ಒಂದು ಪ್ರತ್ಯೇಕ ಟೀಂ ಆಗಲಿದೆ ಎನ್ನುವುದನ್ನು ಹೇಳಲಾಗಿತ್ತು. ಆದರೀಗ ಸುಧಾಕರ್ ಅವರ ವಿರುದ್ಧ ಹಕ್ಕುಚ್ಯುತಿ ಮಂಡಿಸಿದಾಗ, ಇದು ಮತ್ತೊಮ್ಮೆ ಸಾಬೀತಾಗಿದೆ.

ಸುಧಾಕರ್ ವಿರುದ್ಧ ಹಕ್ಕುಚ್ಯುತಿ ಪ್ರಸ್ತಾಪವನ್ನು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಮಂಡಿಸುವಾಗ, ನೂತನ ಸಚಿವರ ತಂಡದ ಬೈರತಿ ಬಸವರಾಜ್, ಬಿ.ಸಿ ಪಾಟೀಲ್, ಎಸ್.ಟಿ ಸೋಮಶೇಖರ, ಶಿವರಾಂ ಹೆಬ್ಬಾರ್, ರಮೇಶ್ ಜಾರಕಿಹೊಳಿ ಸುಧಾಕರ್‌ರನ್ನು ಡಿಫೆಂಡ್ ಮಾಡಿಕೊಳ್ಳುವ ಪ್ರಯತ್ನದಲ್ಲಿದ್ದರು. ಈ ವೇಳೆ ಕಾಂಗ್ರೆಸ್ ನಾಯಕರ ಮೇಲಿರುವ ತಮ್ಮ ಕೋಪವನ್ನು ಸದನದ ದಾಖಲೆಗಳಲ್ಲಿ ಉಳಿಯುವಂತೆ ತಮ್ಮ ಆಕ್ರೋಶ ಹೊರಹಾಕಿದರು.

ಸುಧಾಕರ್ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಮುಂದಾದರೂ ಈ ಸಚಿವರು ಕಾಂಗ್ರೆಸ್ ನಾಯಕರ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದರು. ಈವೇಳೆ ಪದೆಪದೇ ಸ್ಪೀಕರ್ ಕಾಗೇರಿ ಅವರು ಸುಧಾಕರ್ ಪ್ರತಿಕ್ರಿಯಿಸಲಿ ಎನ್ನುವ ಸೂಚನೆ ನೀಡುತ್ತಿದ್ದರೂ, ಅದನ್ನು ಕೇಳದೇ ಪ್ರತಿಪಕ್ಷದ ವಿರುದ್ಧ ಟೀಕಾಪ್ರಹಾರ ಮುಂದುವರಿಸಿದರು. ಒಂದು ಹಂತದಲ್ಲಿ ಸೋಮಶೇಖರ್ ಅವರಿಗೆ ಮಾಧುಸ್ವಾಮಿ ಕುಳಿತುಕೊಳ್ಳವಂತೆ ಮನವಿ ಮಾಡಿದರೂ, ಅದನ್ನು ಧಿಕ್ಕರಿಸಿ ಕಾಂಗ್ರೆಸ್ ವಿರುದ್ಧ ತಮ್ಮ ಆಕ್ರೋಶವನ್ನು ಹೊರಹಾಕಿದರು.

**ಎಲ್ಲರಿಗೂ ರಮೇಶ್‌ಕುಮಾರ್ ಟಾರ್ಗೆಟ್:** ಅನರ್ಹಗೊಂಡು ಜನತಾನ್ಯಾಯಲಯದಲ್ಲಿ ಗೆದ್ದು ಬಂದ ಈ ಎಲ್ಲ ಸಚಿವರಿಗೂ ಸಿದ್ದರಾಮಯ್ಯ ಅವರಿಗಿಂತ, ಮಾಜಿ ಸ್ಪೀಕರ್ ರಮೇಶ್‌ಕುಮಾರ್, ಸಮ್ಮಿಶ್ರ ಸರಕಾರದ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿ, ಪ್ರಿಯಾಂಕ ಖರ್ಗೆ ಅವರ ವಿರುದ್ಧ ವಾಗ್ದಾಳಿ ನಡೆಸಿದರು. ಸುಧಾಕರ್, ಸೋಮಶೇಖರ್ ಅವರು ಸಿದ್ದರಾಮಯ್ಯ ಅವರ ಮೇಲೆ ಯಾವುದೇ ಬೇಸರವಿಲ್ಲ, ಅವರು ನಮ್ಮ ನಾಯಕರು ಎನ್ನುವ ಮಾತುಗಳನ್ನು ಹೇಳುವ ಮೂಲಕ ತಮ್ಮ ಗುರುನಿಷ್ಠೆಯನ್ನು ಪ್ರದರ್ಶನ ಮಾಡಿದರು.

### ನಾವು ಕದ್ದು ಹೋಗಿರಲಿಲ್ಲ

ಇನ್ನು ಸಿದ್ದರಾಮಯ್ಯ ಸೇರಿದಂತೆ ಪ್ರತಿಪಕ್ಷ ಶಾಸಕರು 17 ಶಾಸಕರು ಒಟ್ಟಿಗೆ ಇದ್ದರೂ



ಎನ್ನುವ ಮಾತಿಗೆ ಸಚಿವ ರಮೇಶ್ ಜಾರಕಿಹೊಳಿ ಆಕ್ಷೇಪವ್ಯಕ್ತಪಡಿಸಿದರು. ನಾವ್ಯಾರು ಒಟ್ಟಿಗೆ ರಾಜೀನಾಮೆ ನೀಡಲಿಲ್ಲ, ರಾಜೀನಾಮೆ ನೀಡಿದ ಬಳಿಕವೂ ನಾವೆಲ್ಲೂ ಅಜ್ಞಾತ ಸ್ಥಳದಲ್ಲಿ ಇರಲಿಲ್ಲ, ಬದಲಿಗೆ ಎಲ್ಲರಿಗೂ ಕಾಣುವಂತೆ ಹೋಗಿದ್ದೇವು. ನೀವು ಹೇಳುವಂತೆ ರಾತ್ರೋರಾತ್ರಿ ಓಡಿ ಹೋಗಿಲ್ಲ, ಬೆಳಗ್ಗೆಯೇ ರಾಜಾರೋಷವಾಗಿ ಹೋಗಿದ್ದೇವೆ ಎಂದು ಕಾಂಗ್ರೆಸ್ ಶಾಸಕರಿಗೆ ತಿರುಗೇಟು ನೀಡಿದರು.

### ಪ್ರಿಯಾಂಕ ವಿರುದ್ಧ ವಾಗ್ದಾಳಿ

ಸಮ್ಮಿಶ್ರ ಸರಕಾರದ ಅವಧಿಯಲ್ಲಿ ಸಚಿವ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದ್ದ ಪ್ರಿಯಾಂಕ ಖರ್ಗೆ ವಿರುದ್ಧ ನೂತನ 10 ಸಚಿವರು ವಾಗ್ದಾಳಿ ನಡೆಸಿದರು. ಚರ್ಚೆ ವೇಳೆ ಪ್ರಿಯಾಂಕ ಅವರು, ಮನೆಯೆಂದ ಮೇಲೆ ನಾಲ್ಕು ಅಭಿಪ್ರಾಯ ಇರುವುದು ಸಹಜ. ಅಂದ ಮಾತ್ರಕ್ಕೆ ಮನೆಗೆ ಬೆಂಕಿ ಇಟ್ಟು ಹೋಗಬೇಕೇ ಎಂದು ಪರೋಕ್ಷವಾಗಿ 17 ಶಾಸಕರ ವಿರುದ್ಧ ಟೀಕಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಬೈರತಿ ಬಸವರಾಜ, ಶಿವರಾಮ ಹೆಬ್ಬಾರ, ಬಿ.ಸಿ ಪಾಟೀಲ್, ಎಸ್.ಟಿ ಸೋಮಶೇಖರ ಹಾಗೂ ಸುಧಾಕರ್, ನಿಮಗೆ ತಂದೆಯ ಬಲವಿತ್ತು. ಆದ್ದರಿಂದ ಮೊದಲ ಬಾರಿಗೆ ಗೆದ್ದು ಸಚಿವ ಸ್ಥಾನ ಪಡೆಯುವಲ್ಲಿ ಸಫಲರಾಗಿದ್ದೀರಾ. ನಿಮ್ಮ ಕ್ಷೇತ್ರ ಬಿಟ್ಟು ಬೇರೆ ಕ್ಷೇತ್ರದಲ್ಲಿ ನಿಮ್ಮ ಸಾಧನೆ ಏನು? ಎಷ್ಟು ಬಾರಿ ಕಾಂಗ್ರೆಸ್ ಕಚೇರಿಗೆ ಹೋಗಿದ್ದೀರಿ ಎನ್ನುವುದನ್ನು ನೋಡಿಕೊಳ್ಳಿ ಎಂದು ವಾಗ್ದಾಳಿ ನಡೆಸಿದರು.